ಸಮಾನ ಎಂದರೆ ಒಬ್ಬ ಮನುಷ್ಯ ಸತ್ತ ನಂತರ ದೇಹದ ಉಷ್ಣತೆ ನಿಧಾನವಾಗಿ ತಣ್ಣಗಾಗುತ್ತಾ ಹೋಗುತ್ತದೆ. ಸುಮಾರು ಇಪ್ಪತ್ತು ನಿಮಿಷಗಳಲ್ಲಿ ದೇಹದಲ್ಲಿನ ಉಸಿರು ಸಂಪೂರ್ಣವಾಗಿ ನಿಂತು ಬಿಡುತ್ತದೆ. ಸತ್ತವರನ್ನು ಸಾಮಾನ್ಯವಾಗಿ ಗುರುತಿಸುವುದು ಮೂಗಿನ ಉಸಿರಾಟದಿಂದ. ನಲವತ್ತರಿಂದ ಅರವತ್ತು ನಿಮಿಷಗಳ ಒಳಗೆ ಪ್ರಾಣ ಹೋಗುತ್ತದೆ. ಆರರಿಂದ ಹನ್ನೆರಡು ಗಂಟೆಗಳ ಮಧ್ಯೆ ದೇಹದಿಂದ ಉದಾನ ಹೊರ ಬೀಳುತ್ತದೆ. ದೇಹದಿಂದ ಉದಾನ ಹೊರಬೀಳುವ ಮುಂಚೆ ತಾಂತ್ರಿಕರು ದೇಹವನ್ನು ಪುನಶ್ಚೇತನಗೊಳಿಸಬಲ್ಲರು ಎನ್ನುತ್ತಾರೆ. ಇದನ್ನು ಹಿಂದಿನ ಕಾಲದ ತಾಂತ್ರಿಕರು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಇದನ್ನು ನಮ್ಮ ಪುರಾಣಗಳಲ್ಲಿ ನೋಡಬಹುದು. ಒಮ್ಮೆ ಉದಾನ ದೇಹದಿಂದ ಹೊರಬಿದ್ದರೆ ಅಲ್ಲಿಗೆ ಮನುಷ್ಯ ಸಂಪೂರ್ಣವಾಗಿ ಸಾಯುತ್ತಾನೆ ಎನ್ನಲಾಗಿದೆ. ಎಂಟರಿಂದ ಹದಿನೆಂಟು ಗಂಟೆಗಳ ಒಳಗೆ ಅಪಾನ ಹೊರ ಬೀಳುತ್ತದೆ. ಸಾಮಾನ್ಯವಾಗಿ ಸಾಯುವವರ ಪ್ರಾಣ ಸಂರಕ್ಷಿಸುವ ವ್ಯಾನ ಹನ್ನೊಂದರಿಂದ ಹದಿನಾಲ್ಕು ಗಂಟೆಗಳ ಮಧ್ಯೆ ಹೊರ ಬೀಳುತ್ತದೆ. ಯಾರಾದರು ಅಪಘಾತದಲ್ಲಿ ಸತ್ತರೆ ಅವರ ಪ್ರಾಣ ತುಡಿಯುತ್ತಲೇ ಇರುತ್ತದೆ. ದೇಹ ಸಂಪೂರ್ಣವಾಗಿ ಜಜ್ಜಿಹೋದರೂ ಅವರ ಜೀವ ಎಲ್ಲೋ ಯಾವುದೋ ರೀತಿಯಲ್ಲಿ ನಲವತ್ತೆಂಟು ದಿನಗಳಿಂದ ತೊಂಬತ್ತು ದಿನಗಳವರೆಗೂ ಅಲೆಯುತ್ತಾ ಇರುತ್ತದೆ ಎನ್ನಲಾಗಿದೆ. ಇದೆಲ್ಲವನ್ನು ನಾನು ನಿಮಗೆ ಹೇಳುವ ಕಾರಣವೆಂದರೆ ನಾನು ಸತ್ತಾಗ ನನ್ನ ಆತ್ಮ ಅಥವಾ ಪ್ರೇತಾತ್ಮ ನನ್ನ ದೇಹದಿಂದ ಹೊರಗೆ ಬರಲು ಎಷ್ಟು ಸಮಯ ತೆಗೆದುಕೊಂಡಿತೋ ಗೊತ್ತಾಗಲಿಲ್ಲ? ಆದರೆ ಯಾವುದೂ ನನಗೆ ಸರಿಯಾಗಿ ಜ್ಞಾಪಕಕ್ಕೆ ಬರುತ್ತಿಲ್ಲ. ಸಾವಿನ ಆಚೆ ಮತ್ತು ಆತ್ಮದ ಬಗ್ಗೆ ನನಗೂ ಅರ್ಥವಾಗುತ್ತಿಲ್ಲ. ಇದೆಲ್ಲ ಸತ್ತ ಮೇಲೆ ಗೊತ್ತಾಗುತ್ತದೆ ಎನ್ನುವುದು ಕೂಡ ಸರಿಯೋ ತಪ್ಪೋ ಗೊತ್ತಿಲ್ಲ. ಆದರೆ ನನ್ನ ಆತ್ಮ, ಪ್ರೇತಾತ್ಮ ಈಗ ಗೋಡೆಯ ಮೇಲೆ ಕುಳಿತುಕೊಂಡಿರುವುದು ಮಾತ್ರ ಸತ್ಯ.

***

ಈಗ ನನ್ನ ಕಥೆಯ ಇನ್ನೊಂದು ಘಟ್ಟವನ್ನು ನಿಮಗೆ ಹೇಳುತ್ತೇನೆ. ಆ ಕತೆ ನಾನು ಹೇಳಲಾರದಂತಹ ಅಥವಾ ಹೇಳಿಕೊಳ್ಳಲಾರದಂತಹ ಕಥೆ. ಆದರೆ ನಾನು ಸತ್ತೋಗಿರುವುದರಿಂದ ನನಗೇನೂ ತೊಂದರೆ ಇಲ್ಲ. ಭೂಮಿಯ ಮೇಲಿನ ಆಧುನಿಕ ಕಾಲಘಟ್ಟದಲ್ಲಿ ಇದೆಲ್ಲ ಸಹಜವೇ ಆಗಿಬಿಟ್ಟಿದೆ. ಇಲ್ಲಿಂದ ನನ್ನ ಮಗನದು ಒಂದು ಕಥೆಯಾದರೆ, ಮಗಳದು ಇನ್ನೊಂದು ಕಥೆ. ನಾನು, ನನ್ನ ಪತ್ನಿಯದು ಮಾತ್ರ ಒಂದೇ ಕಥೆ. ಮಕ್ಕಳು ದೊಡ್ಡವರಾಗಿದ್ದರಿಂದ ಅವರನ್ನು ಈಗ ಮಕ್ಕಳು ಎಂದು ಕರೆಯಲು ನನ್ನಿಂದ ಆಗುತ್ತಿಲ್ಲ. ತೇಜಸ್‌ನನ್ನು ತೇಜಸ್ ಎಂದು, ದಮಯಂತಿಯನ್ನು ದಮಯಂತಿ ಎಂದೇ ಕರೆಯುತ್ತಿದ್ದೆ. ಸಾವಿತ್ರಿಗೆ ಕೋಪ ಬಂದರೆ ದಮ್ಮೂ ಎಂದೂ ಉಳಿದ ಸಮಯದಲ್ಲಿ ದಮಯಂತಿ ಎಂದು ಕರೆಯುತ್ತಿದ್ದಳು. ತೇಜಸ್‌ನನ್ನು ಮೊದಲಿಂದಲೂ ತೇಜು ಎಂದೇ ಕರೆಯುತ್ತಿದ್ದಳು. ತೇಜಸ್ ಮತ್ತು ದಮಯಂತಿ ಇಬ್ಬರೂ ದಮ್ಮೂ, ತೇಜು ಎಂದು ಕರೆದುಕೊಳ್ಳುತ್ತಿದ್ದರು. ಈಗ ಇಬ್ಬರೂ ಎಂಜಿನಿಯರಿಂಗ್‌ನ ಕೊನೆ ವರ್ಷ ಓದುತ್ತಿದ್ದರು. ಅವರ ಓಡಾಟವು ನಮ್ಮ ಅಂಕೆಯಲ್ಲಿ ಇಲ್ಲದೆ ಹೋಗಿತ್ತು. ನಾವು ಕೂಡ ಅವರನ್ನು ಆದಷ್ಟು ಫ್ರೀಯಾಗಿ ಬಿಟ್ಟುಬಿಟ್ಟಿದ್ದೆವು. ಈಗೀಗ ಯಾರೋ ಹುಡುಗರು, ಯಾರೋ ಹುಡುಗಿಯರು ನಮ್ಮ ಮನೆಗೆ ಬಂದು ಹೋಗುತ್ತಿದ್ದರು. ಇವರೂ ಕೂಡ ಹಗಲೂ ರಾತ್ರಿಯೆನ್ನದೆ ಓಡಾಡುತ್ತಿದ್ದರು.

ಒಂದು ದಿನ ರಾತ್ರಿ, ಸಾವಿತ್ರಿ ನಾನು ಎಂದಿನಂತೆ ಹಾಸಿಗೆ ಮೇಲೆ ಮಲಗಿಕೊಂಡು ತಲೆದಿಂಬು ಮಾತುಗಳನ್ನು ಮಾತನಾಡುತ್ತಿದ್ದೆವು. ಸಾವಿತ್ರಿ ನಿಧಾನವಾಗಿ 'ರೀ ನಾನೊಂದು ವಿಷಯ ಹೇಳ್ತೀನಿ ಕೋಪ ಮಾಡಿಕೊಳ್ಳದೆ ಕೇಳಿ' ಎಂದಳು. ನಾನು ಸಾವಿತ್ರಿಯ ಮಾತುಗಳನ್ನು ಯಾವಾಗಲೂ ಕೋಪಿಸಿಕೊಂಡು ಕೇಳುವುದಿಲ್ಲ. ಕೋಪಿಸಿಕೊಳ್ಳುವುದು ಬಹಳ ಅಪರೂಪ. ಅದೂ ಹಾಸಿಗೆ ಮೇಲೆ ಕೋಪಿಸಿಕೊಳ್ಳುವುದಾದರು ಹೇಗೆ? ಯಾಕೊ ಏನೊ ಸ್ವಲ್ಪ ಕಹಿಯಾದ ವಿಷಯವೇ ಇರಬೇಕು ಎಂದುಕೊಂಡು 'ಅಂತದ್ದು ಏನು ವಿಷಯ?' ಎಂದೆ. 'ನಮ್ಮ ತೇಜು ಯಾವುದೋ ಹುಡುಗಿ ಜೊತೆ ಓಡಾಡ್ತಾ ಇದ್ದಾನೆ ಅನಿಸುತ್ತೆ' ಎನ್ನುತ್ತಿದ್ದಂತೆ, 'ಇದರಲ್ಲಿ ಕೋಪಿಸಿಕೊಳ್ಳುವುದು ಏನಿದೆ? ವಯಸ್ಸು ಹುಡುಗ' ಎಂದೆ. ಸಾವಿತ್ರಿ 'ಅವನು ವಯಸ್ಸು ಹುಡುಗ ಅಂತ ನನಗೂ ಗೊತ್ತು' ಎಂದಳು.

'ಮತ್ತೆ?' ಎಂದೆ. ಸಾವಿತ್ರಿ 'ಬೆಳಿಗ್ಗೆ ಒಂದು ಹುಡುಗೀನ ಮನೇಗೆ ಕರ್ಕೊಂಡು ಬಂದಿದ್ದ. ಆ ಹುಡುಗಿ ಬಂದಿದ್ದೇ ನನ್ನ ಕಾಲಿಗೆ ಬಗ್ಗಿ ನಮಸ್ಕಾರ ಮಾಡಿದಳು. ಮೈಸೂರು ಕಡೆಯ ಬ್ರಾಹ್ಮಣರಂತೆ' ಎಂದಳು. 'ಇದೆಲ್ಲ ಆ ಹುಡುಗೀನೆ ಹೇಳಿದ್ಳ?' ಕೇಳಿದೆ. ಸಾವಿತ್ರಿ 'ಇಲ್ಲ ತೇಜು ಹೇಳಿದ. ನನಗ್ಯಾಕೊ ಭಯ ಆಗುತ್ತೆ' ಎಂದಳು ಸಾವಿತ್ರಿ. ಈ ದಿಢೀರ್ ಬೆಳವಣಿಗೆಯ ಬಗ್ಗೆ ಕೇಳಿ ನನಗೂ ಮನಸ್ಸಿನಲ್ಲಿ ಸ್ವಲ್ಪ ಆತಂಕವಾಯಿತು. ಇಂತಹ ವಿಷಯಗಳಲ್ಲಿ ಹೆಣ್ಣು ಮಕ್ಕಳು ನಮಗಿಂತ ಹೆಚ್ಚು ಮುಂದಾಲೋಚನೆ ಮಾಡುತ್ತಾರೆ. ಸಾವಿತ್ರಿ ಹೇಳುವುದರಲ್ಲಿ ಏನೋ ವಿಷಯ ಅಡಗಿದೆ ಎಂದುಕೊಂಡೆ.

ಮರುದಿನ ಸಾಯಂಕಾಲ ತೇಜು ಊಟದ ಮೇಜಿನ ಮುಂದೆ ನನ್ನ ಎದುರಿಗೆ ಕುಳಿತುಕೊಂಡು ಊಟ ಮಾಡುತ್ತಿದ್ದ. 'ತೇಜಸ್ ಯಾರು ಆ ಹುಡುಗಿ? ನಿನಗೂ ಅವಳಿಗೂ ಏನು ಸಂಬಂಧ?' ಎಂದೆ. ದಿಢೀರನೆ ಬಂದ ನನ್ನ ಪ್ರಶ್ನೆಯಿಂದ ತಬ್ಬಿಬ್ಬಾದ ತೇಜಸ್. ಅಷ್ಟರಲ್ಲಿ ಸಾವಿತ್ರಿ ಅಡುಗೆ ಕೋಣೆಯಿಂದ ಹೊರಕ್ಕೆ ಬಂದು 'ಅದೇ ಕಣೊ, ನಿನ್ನೆ ನೀನು ನಮ್ಮ ಮನೆಗೆ ಕರ್ಕೊಂಡು ಬಂದಿದ್ದಿಯಲ್ಲ?' ಎಂದಳು.

'ಓ! ರಾಧಾನ? ನನ್ನ ಕ್ಲಾಸ್‌ಮೇಟ್' ಎಂದ ಬಹಳ ಕೂಲಾಗಿ. ಸಾವಿತ್ರಿ ನನ್ನ ಕಡೆಗೆ ನೋಡಿ ಸುಮ್ಮನೆ ಇರುವಂತೆ ಕಣ್ಣು ಮಿಟುಕಿಸಿದಳು. ಮತ್ತೆ ಸಾವಿತ್ರಿ, 'ನೋಡು ತೇಜು. ನೀನಾಗಲಿ ದಮಯಂತಿಯಾಗಲಿ ಲವ್ವು ಗಿವ್ವು ಅಂತ ಏನೇನೊ ಮಾಡುವುದಕ್ಕೆ ಹೋಗ್ಬೇಡಿ. ಮೊದಲು ಡಿಗ್ರಿ ಮುಗಿಸಿ ಕೆಲಸಕ್ಕೆ ಸೇರಿಕೊಳ್ಳಿ' ಎಂದಳು. 'ಅಮ್ಮ ಸುಮ್ಮನೇ ಯಾಕೆ ತಲೆ ಕೆಡಿಸಿಕೊಳ್ತಿಯಾ? ಇದು ನಿಮ್ಮ ಕಾಲ ಅಲ್ಲ ಬಿಡಮ್ಮ' ಎಂದ. 'ಅಂದರೆ ಏನದಕ್ಕ ಅರ್ಥ?' ಎಂದೆ. 'ಇದನ್ನೇ **generation gap** ಅನ್ನೂದು' ಅಂದ. ನನಗೆ ಒಮ್ಮೆಲೇ ಪಿತ್ತ ನೆತ್ತಿಗೇರಿತು. ಮೊದಲ ಬಾರಿಗೆ ತೇಜಸ್ ಈ ರೀತಿ ನನ್ನನ್ನ ಹಂಗಿಸುವಂತೆ ಮಾತಾಡಿದ್ದ. ಅಷ್ಟರಲ್ಲಿ ದಮಯಂತಿ ಹೊರಕ್ಕೆ ಬಂದು 'ಅಮ್ಮ ನನಗೆ ಊಟ ಹಾಕು' ಎಂದು ಊಟದ ಮೇಜಿನ ಮುಂದೆ ಕುಳಿತುಕೊಂಡಳು. ಬಹುಶಃ ಅವಳು, ನನ್ನ ಮತ್ತು ತೇಜಸ್ ಮಧ್ಯೆ ನಡೆಯುತ್ತಿರುವ ಮಾತುಗಳನ್ನು ತಿಳಿ ಮಾಡಲೆಂದು ಬಂದಿರಬೇಕು ಎಂದುಕೊಂಡೆ.

***

ಈಗ ತೇಜಸ್ ಮತ್ತು ದಮಯಂತಿ ಮಾಡುವ ಕೆಲಸಗಳಿಂದ ನಮಗೆ ಮನೆಯಲ್ಲಿ ಆಗಾಗ ಸ್ವಲ್ಪ ಆತಂಕವಾಗುತ್ತಿತ್ತು. ಕೆಲವೊಮ್ಮೆ ತೇಜಸ್ ರಾತ್ರಿ ಹತ್ತು, ಹನ್ನೊಂದು ಗಂಟೆಗೆ ಬರುತ್ತಿದ್ದ. ದಮಯಂತಿಯೂ ಅದೇ ರೀತಿ ಓಡಾಡುತ್ತಿದ್ದಳು. ದಮಯಂತಿ ಅವಳ ಕಾಲೇಜಿನಲ್ಲಿಯೂ ಆಗಾಗ ಹುಡುಗರ ಜೊತೆಗೆ ಜಗಳ ಮಾಡುತ್ತಿದ್ದಳು ಎಂಬುದಾಗಿ ತೇಜಸ್ ಅವರ ಅಮ್ಮನಿಗೆ




**ಆಯ್ಕೆ**

ಪ್ರಶಸ್ತಿಗಾಗಿ ಅರ್ಜಿ
ಆಹ್ವಾನಿಸಿದಿರಂತೆ
ಹೌದೆ?
ಹೌದು
ಯಾವುದು ಕೊಡಲಿ?
ಪ್ರೀ ಪೈಡಾ?
ಪೋಸ್ಟ್ ಪೈಡಾ?

**–ಡಾ. ಕಾಸರಗೋಡು ಅಶೋಕ್ ಕುಮಾರ್**